## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ .

## ಸಿಸಿ ನಂ.182/2020

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ.

**-ಃ ವಿರುದ್ದ ಃ-**

**ಆರೋಪಿತರುಃ**

1. ಮಲ್ಲಪ್ಪ ತಂದ ರೇವಣಸಿದ್ದಪ್ಪ ತಳವಾರ, 35 ವರ್ಷ,
ಉಃ ಒಕ್ಕಲುತನ,

2. ರೇವಣಸಿದ್ದಪ್ಪ ತಂದೆ ಮಹಾದೇವಪ್ಪ ತಳವಾರ, 60 ವರ್ಷ,
ಉಃ ಕೂಲಿ ಕೆಲಸ,

3. ಭೀಮಣ್ಣಾ ತಂದೆ ಮಹಾದೇವಪ್ಪ ತಳವಾರ, 50 ವರ್ಷ,
ಉಃ ಕೂಲಿ ಕೆಲಸ,

4. ಅಪ್ಪಾಶಾ ತಂದೆ ರೇವಣಸಿದ್ದಪ್ಪ ತಳವಾರ, 30 ವರ್ಷ,
ಉಃ ಕೂಲಿ ಕೆಲಸ,

5. ಶಿವಮ್ಮಾ ಗಂಡ ರೇವಣಸಿದ್ದಪ್ಪ ತಳವಾರ, 55 ವರ್ಷ,
ಉಃ ಕೂಲಿ ಕೆಲಸ,

6. ಈರಮ್ಮಾ ಗಂಡ ಭೀಮಣ್ಣಾ ತಳವಾರ, 45 ವರ್ಷ,
ಉಃ ಕೂಲಿ ಕೆಲಸ,

ಎಲ್ಲರ ವಾಸಃ ಹವಳಗಾ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 31.07.2023 ರಂದು ಮಧ್ಯಾಹ್ನ 12-00ಗಂಟೆ ಸುಮಾರಿಗೆ ಅಫಜಲಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹವಳಗಾ ಸೀಮಾಂತರ ಹೊಲ ಸರ್ವೆ ನಂ. 33/6 ನೇದ್ದರಲ್ಲಿ ಫಿರ್ಯಾದಿ ಚಾಸಾ-1 ಬರಮೇಶ, ಮತ್ತು ಚಾಸಾ-4 ರಿಂದ 7 ರವರು ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯ ಮಾತನಾಡುತ್ತಾ

ಕುಳಿತುಕೊಂಡಾಗ, ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಹೊಲಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ನೀವು ಭಾ.ದಂ.ಸಂ. 447 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾ ಹರ್ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಹೊಲದ ಸರ್ವೆ ನಂ.33/6 ರ ಹೊಲದಲ್ಲಿ ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ಬರಮೇಶ, ಮತ್ತು ಚಾಸಾ-4 ರಿಂದ 7ರವರು ಮಾತನಾಡುತ್ತಾ ಕುಳಿತುಕೊಂಡಾಗ, ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದಿದ್ದು, ಆ ಮೂಲಕ ನೀವು ಭಾ.ದಂ.ಸಂ. 143 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾ ಹರ್ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಹೊಲದ ಸರ್ವೆ ನಂ.33/6 ರ ಹೊಲದಲ್ಲಿ ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ಬರಮೇಶ, ಮತ್ತು ಚಾಸಾ-4 ರಿಂದ 7ರವರು ಮಾತನಾಡುತ್ತಾ ಕುಳಿತುಕೊಂಡಾಗ, ಆರೋಪಿತರಾದ ನೀವುಗಳು ಕೈಯಲ್ಲಿ ಕಲ್ಲು ಹಿಡಿದುಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.147 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾ ಹರ್ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯದ ಹಿನ್ನಲೆಯಲ್ಲಿ ನಿಮ್ಮಲ್ಲಿ 1ನೇ ಆರೋಪಿಯಾದ ನೀವು ಕಲ್ಲಿನಿಂದ ಫಿರ್ಯಾದಿ ಚಾಸಾ-1 ರವರ ತಲೆಗೆ ಹೊಡೆದು, ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾ ಹರ್ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಹೊಲದ ಸರ್ವೆ ನಂ.33/6 ರ ಹೊಲದಲ್ಲಿ ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ಬರಮೇಶ, ಮತ್ತು ಚಾಸಾ-4 ರಿಂದ 7ರವರು ಮಾತನಾಡುತ್ತಾ ಕುಳಿತುಕೊಂಡಾಗ, ಆರೋಪಿತರಾದ ನೀವುಗಳು ಅಕ್ರಮ ಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 1ನೇ ಆರೋಪಿತಯಾದ ನೀವು ಫಿರ್ಯಾದಿ ಚಾಸಾ-1 ಬರಮೇಶ ರವರಿಗೆ ಏ ಮಗನೇ ನಿಂದು ಬಹಳ ನಡದಾದ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾ ಹರ್ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಹೊಲದ ಸರ್ವೆ ನಂ.33/6 ರ ಹೊಲದಲ್ಲಿ ಶ್ರೀಯಲ್ಲಮ್ಮಾ ದೇವಿ ಗುಡಿ ಕಟ್ಟದ ವಿಷಯದ ಹಿನ್ನಲೆಯಲ್ಲಿ ನಿಮ್ಮಲ್ಲಿ 2 ರಿಂದ 6ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಬರಮೇಶ ರವರಿಗೆ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿ ಹೊಡೆದು ಜೀವ ಹೊಡೆಯುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-3

ಆ-4

ಆ-5

ಆ-6

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 30-01-2025 ಪ್ರ.ದ.ನ್ಯಾ .ದಂ. ಅಫಜಲಪೂರ.